**ದಿನಾಂಕಃ 05-07-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಆರ್. ಎಸ್. ಎಸ್. ವಕೀಲರಿಂದಃ**

ಮೃತ ರಾಕೇಶ ನನ್ನ ಮಗ. ಅವನು ದ್ವಿ ಚಕ್ರ ವಾಹನದ ಹಿಂಬದಿ ಸವಾರನಾಗಿದ್ದ. ದ್ವಿ ಚಕ್ರ ವಾಹನವನ್ನು ಅದರ ಚಾಲಕ ವೇಗವಾಗಿ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಎದುರಿನಿಂದ ಅಪಘಾತವಾಗಿರುತ್ತದೆ. ಕಾರಿನ ಚಾಲಕ ನಿಧಾನವಾಗಿ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಅವರ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ದ್ವಿ ಚಕ್ರ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಇದರಿಂದಾಗಿ ಪರಿಹಾರ ಪಡೆಯುವ ಸಲುವಾಗಿ ವಿಮೆ ಹೊಂದಿದ ಕಾರಿನ ಮೇಲೆ ಒಂದು ದಿನ ತಡವಾಗಿ ಉದ್ದೇಶಪೂರ್ವಕವಾಗಿ ದೂರು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

2. ಅನಮಟ್ಟಿ ಕಡೆಯಿಂದ ನನ್ನ ಮಗ ಇದ್ದ ದ್ವಿ ಚಕ್ರ ವಾಹನ ಬರುತ್ತಿತ್ತು. ನಿಪಿ-7 ರ ಅಂತಿಮ ವರದಿಯಲ್ಲಿ ಅನಮಟ್ಟಿ ಕಡೆಯಿಂದ ಬರುತ್ತಿರುವಾಗ ಎಂದು ನಮೂದಾಗಿದೆ ಎಂದರೆ ತಪ್ಪಾಗಿ ನಮೂದಾಗಿರುತ್ತದೆ. ಸುಳ್ಳು ದೂರು ಸೃಷ್ಟಿಸಿರುವ ಕಾರಣ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ದ್ವಿ-ಚಕ್ರ ವಾಹನದ ಚಾಲಕ ಡಿ.ಎಲ್ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಅಂತ್ಯ ಸಂಸ್ಕಾರಕ್ಕೆ ರೂ.1,00,000/-ಗಳನ್ನು ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಅಪಘಾತದ ಕಾಲಕ್ಕೆ ಯಾವುದೇ ಆದಾಯ ಹೊಂದಿಲ್ಲದಿದ್ದರು ಅಪಘಾತ ಪೂರ್ವದಲ್ಲಿ ಮಾಸಿಕ ರೂ.25,000/- ಗಳನ್ನು ಗಳಿಸುತ್ತಿದ್ದ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗ 16-17 ವರ್ಷ ವಯಸ್ಸಿನವನಾಗಿದ್ದ ಎಂದರೆ ಸರಿಯಲ್ಲ. ಅವನಿಗೆ 18 ವರ್ಷವಾಗಿತ್ತು. ನಾವು ಮೃತ ರಾಕೇಶನ ಕಾನೂನು ಬದ್ಧ ವಾರಸುದಾರರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೃತ ರಾಕೇಶ ನನ್ನ ಕಿರಿಯ ಮಗನಾಗಿದ್ದು, ಉಳಿದ ಇಬ್ಬರು ಹಿರಿಯ ಮಕ್ಕಳಾಗಿರುತ್ತಾರೆ. ಮೃತ ರಾಕೇಶ ನನ್ನ ಮೇಲೆ ಸಂಪೂರ್ಣ ಅವಲಂಬಿತನಾಗಿದ್ದ ಎಂದರೆ ಸರಿಯಲ್ಲ. 2 ನೇ ಅರ್ಜಿದಾರರೊಬ್ಬರೇ ಕುಟುಂಬವನ್ನು ನಡೆಸುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬ ಎಂದಿಗೂ ಮೃತ ರಾಕೇಶ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ.

3. ಕಾರಿನ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರರು ಪರಿಹಾರ ನೀಡಲು ಹೊಣೆಗಾರರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರು ಗೈರು ಹಾಜರಾಗಿದ್ದು, ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 05–07–2025.

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ
ಹಿರೇಕೆರೂರು